**Vijaya Karnataka, 21-02-2023, Page No. 6, State.**

ವಿಟಿಯು ಇತಿಹಾಸದಲ್ಲೇ ಹೆಚ್ಚು ಚಿನ್ನದ ಪದಕ ಪಡೆದ ವಿದ್ಯಾರ್ಥಿ । ಫೆ.24ರಂದು ಘಟಿಕೋತ್ಸವ

# ಮುರಳಿ ಮುಡಿಗೆ ದಾಖಲೆಯ 18 ಚಿನ್ನ!

**ವಿಕ ಸುದ್ದಿಲೋಕ** ಬೆಳಗಾವಿ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ದ 22ನೇ ಘಟಿಕೋತ್ಸವ ಫೆ. 24ರಂದು ನಡೆಯಲಿದ್ದು, ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಎಂಜಿನಿಯರಿಂಗ್ ವಿದ್ಯಾರ್ಥಿ ಮುರಳಿ ಎಸ್. ವಿವಿ ಇತಿಹಾಸದಲ್ಲೇ ದಾಖಲೆಯ 18 ಚಿನ್ನದ ಪದಕ ಬಾಚಿಕೊಂಡಿದ್ದಾರೆ.

ಕುಲಪತಿ ಪ್ರೊ. ವಿದ್ಯಾಶಂಕರ್ ಎಸ್. ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ಹಂಚಿಕೊಂಡರು. ''ಅಂದು ಬೆಳಗ್ಗೆ 11.30ಕ್ಕೆ ವಿವಿ ಜ್ಞಾನ ಸಂಗಮ ಆವರಣದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ನಡೆಯಲಿರುವ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅಧ್ಯಕ್ಷತೆ ವಹಿಸುವರು. ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ ಅಧ್ಯಕ್ಷ ಪ್ರೊ. ಟಿ.ಜಿ. ಸೀತಾರಾಮ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಘಟಿಕೋತ್ಸವ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಡಾ. ಸಿ. ಎನ್. ಅಶ್ವತ್ಥನಾರಾಯಣ್ ಉಪಸ್ಥಿತರಿರುವರು'', ಎಂದು ತಿಳಿಸಿದರು.

**ಮೂವರಿಗೆ ಡಾಕ್ಟರ್ ಆಫ್ ಸೈನ್ಸ್ ಗೌರವ:** ''ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಅತ್ಯುನ್ನತ ಸೇವೆ ಸಲ್ಲಿಸಿದ ವಿಕ್ರಮ್ ಕಿರ್ಲೋಸ್ಕರ್ (ಮರಣೋತ್ತರ), ಟಿವಿಎಸ್ ಆಟೋಮೋಟಿವ್ ಸೊಲ್ಯೂಷನ್ಸ್ ಅಧ್ಯಕ್ಷ ಎಂ. ಲಕ್ಷ್ಮೀನಾರಾಯಣ ಹಾಗೂ ಬೆಳಗಾಂ ಫೆರೋಕಾಸ್ಟ್ ಇಂಡಿಯಾ ಪ್ರೈ.ಲಿ., ವ್ಯವಸ್ಥಾಪಕ ನಿರ್ದೇಶಕ ಸಚಿನ್ ಸಬ್ನಿಸ್ ಅವರಿಗೆ ಡಾಕ್ಟರ್ ಆಫ್ ಸೈನ್ಸ್ ಗೌರವ ಪ್ರದಾನ ಮಾಡಲಾಗುತ್ತದೆ'', ಎಂದು ತಿಳಿಸಿದರು.

**700ಕ್ಕೂ ಹೆಚ್ಚು ಪಿಎಚ್‌ಡಿ:** ''ವಿಟಿಯು ಇತಿಹಾಸದಲ್ಲೇ ಮೊದಲ ಬಾರಿಗೆ ಸಂಶೋಧನಾ ಅಧ್ಯಯನ ಮುಗಿಸಿದ 701 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪ್ರದಾನ ಮಾಡಲಾಗುತ್ತಿದೆ. ಇವುಗಳಲ್ಲಿ ಬಿಇ/ಬಿಟೆಕ್ 51,905, ಬಿಪ್ಲಾನ್ 9, ಬಿ.ಆರ್ಕ್ 1032, ಎಂಬಿಎ 4279, ಎಂಸಿಎ 2028, ಎಂ.ಟೆಕ್ 1363, ಎಂ.ಆರ್ಕ್ 82 ಹಾಗೂ 1 ಪಿಜಿ ಡಿಪ್ಲೊಮಾ ಪದವಿಗಳಿವೆ. 2 ಎಂಎಸ್ಸಿ (ಎಂಜಿನಿಯರಿಂಗ್) ಮತ್ತು 4 ಇಂಟಿಗ್ರೇಟೆಡ್ ಡುಯಲ್ ಡಿಗ್ರಿ ಪದವಿ ಪ್ರದಾನ ಮಾಡಲಾಗುವುದು'', ಎಂದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಪ್ರೊ. ಬಿ. ಈ. ರಂಗಸ್ವಾಮಿ, ಮೌಲ್ಯಮಾಪನ ಕುಲಸಚಿವ ಪ್ರೊ. ಟಿ.ಎನ್. ಶ್ರೀನಿವಾಸ ಉಪಸ್ಥಿತರಿದ್ದರು.

## ಟಾಪ್ 10 ಗೋಲ್ಡನ್ ಸ್ಟೂಡೆಂಟ್ಸ್

- ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಎಂಜಿನಿಯರಿಂಗ್ ವಿದ್ಯಾರ್ಥಿ ಮುರಳಿ ಎಸ್. 18 ಚಿನ್ನದ ಪದಕ
- ಸುಳ್ಯ ಕುರುಂಜಿ ವೆಂಕಟರಮಣ ಗೌಡ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಮೆಕ್ಯಾನಿಕಲ್ ವಿದ್ಯಾರ್ಥಿನಿ ಕೃತಿ ಎಸ್. 8 ಚಿನ್ನದ ಪದಕ
- ಬೆಂಗಳೂರು ಎಸಿಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಇ ಆ್ಯಂಡ್ ಸಿ ವಿದ್ಯಾರ್ಥಿನಿ ಸ್ವಾತಿ ಎಸ್. 7 ಚಿನ್ನದ ಪದಕ.
- ಬೆಂಗಳೂರು ಎಸ್.ಎಂ.ವಿ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿನಿ ಸುಶ್ಮಿತಾ ಎಸ್.ವಿ. 6 ಚಿನ್ನದ ಪದಕ
- ಬೆಂಗಳೂರಿನ ಬಿ.ಎನ್.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿನಿ ಪೂಜಾ ಭಾಸ್ಕರ್ 6 ಚಿನ್ನದ ಪದಕ
- ಬೆಂಗಳೂರಿನ ಆರ್.ಎನ್.ಎಸ್. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಲೆಕ್ಟ್ರಾನಿಕ್ಸ್ ಆ್ಯಂಡ್ ಇನ್‌ಸ್ಟ್ರುಮೆಂಟೇಶನ್ ವಿದ್ಯಾರ್ಥಿ ಅಭಿಲಾಷ್ ಎಂ. 4 ಚಿನ್ನದ ಪದಕ
- ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಇನ್‌ಫಾರ್ಮೇಶನ್ ಸೈನ್ಸ್ ವಿದ್ಯಾರ್ಥಿನಿ ಯುವಿಕಾ ರಮೇಶ್ ಬಾಬು 4 ಚಿನ್ನದ ಪದಕ.
- ಬೆಂಗಳೂರು ಆರ್‌ಎನ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಬಿಎ ವಿದ್ಯಾರ್ಥಿನಿ ಹರ್ಷವರ್ಧಿನಿ ಜಿ. 4 ಚಿನ್ನದ ಪದಕ
- ಬೆಂಗಳೂರು ಬಿಎಂಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಸಿಎ ವಿದ್ಯಾರ್ಥಿ ಅರ್ಜುನ್ ಯು.ಕೆ. 3 ಚಿನ್ನದ ಪದಕ
- ದಾವಣಗೆರೆ ಯುಬಿಡಿಟಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಎಂ.ಟೆಕ್ ವಿದ್ಯಾರ್ಥಿನಿ ಸಂಗೀತಾ ಜಿ.ಆರ್. 2 ಚಿನ್ನದ ಪದಕ.


ಮುರಳಿ


ಕೃತಿ ಎಸ್.